# ರಾಜ್ಯಸಭೆಯಲ್ಲಿ ನಡೆದಿರುವುದು ಕೇವಲ ಮೂರು ತಾಸು ಕಲಾಪ!

**ಹೊಸದಿಲ್ಲಿ:** ಪ್ರತಿಪಕ್ಷಗಳ ಗದ್ದಲದಿಂದಾಗಿ ರಾಜ್ಯಸಭೆಯಲ್ಲಿ ಕಳೆದ ವಾರ ಕೇವಲ 2 ಗಂಟೆ 45 ನಿಮಿಷ ಮಾತ್ರ ಕಲಾಪ ನಡೆದಿದೆ.

ಸಂಸತ್‌ನ ಬಜೆಟ್ ಅಧಿವೇಶನವು ಮೂರು ವಾರಗಳ ಬಿಡುವಿನ ಬಳಿಕ ಕಳೆದ ಸೋಮವಾರ (ಮಾರ್ಚ್ 2) ಮತ್ತೆ ಆರಂಭಗೊಂಡಿದೆ. ಉಭಯ ಸದನಗಳಲ್ಲಿಯೂ ದಿಲ್ಲಿ ಗಲಭೆ ಕುರಿತು ಚರ್ಚೆ ಮತ್ತು ಗೃಹ ಸಚಿವ ಅಮಿತ್ ಶಾ ರಾಜೀನಾಮೆಗೆ ಆಗ್ರಹಿಸಿ ಪ್ರತಿಪಕ್ಷಗಳ ಮೊದಲ ದಿನದಿಂದಲೂ ಪ್ರತಿಭಟನೆ, ಗದ್ದಲ ನಡೆಸುತ್ತಲೇ ಇವೆ. ಹೀಗಾಗಿ ಕಳೆದ ವಾರದ ಐದೂ ದಿನ ಉಭಯ ಸದನಗಳೂ ಕಲಾಪ ಮುಂದೂಡಿಕೆ ಕಂಡಿವೆ. ಲೋಕಸಭೆಯಲ್ಲಿ ಕೊರೊನಾ ಕುರಿತು ಚರ್ಚೆ ನಡೆದಿದ್ದು, ಎರಡು ವಿಧೇಯಕಗಳು ಅಂಗೀಕಾರವಾಗಿವೆ. ರಾಜ್ಯಸಭೆಯಲ್ಲಿ ಮಾತ್ರ ಪ್ರಶ್ನೋತ್ತರ ಕಲಾಪ ಹೊರತುಪಡಿಸಿ ಬೇರಾವುದೇ ಕಲಾಪ ನಡೆದಿಲ್ಲ. ಪ್ರಶ್ನೋತ್ತರ ಅವಧಿಯಲ್ಲಿಯೂ ನಿಗದಿಯಾಗಿದ್ದ 28 ಗಂಟೆ 30 ನಿಮಿಷದ ಪೈಕಿ ಕಲಾಪ ನಡೆದಿರುವುದು 2 ಗಂಟೆ 45 ನಿಮಿಷ ಮಾತ್ರ. 25 ಗಂಟೆ 45 ನಿಮಿಷ ಪ್ರತಿಭಟನೆಯಿಂದ ವ್ಯರ್ಥವಾಗಿದೆ. ಸದನದ ಉತ್ಪಾದಕತೆ ಕಳೆದ ವಾರ ಶೇ.9.5ರಷ್ಟು ಮಾತ್ರವೇ ದಾಖಲಾಗಿದೆ.

ಇನ್ನು, ಅಧಿವೇಶನಕ್ಕೆ ಮುನ್ನ ನಡೆದ ರಾಜ್ಯಸಭೆಯ ಇಲಾಖಾವಾರು ಸ್ಥಾಯಿ ಸಮಿತಿಗಳ ಸಭೆಯಲ್ಲಿಯೂ ಸದಸ್ಯರ ಹಾಜರಾತಿ ಶೇ.50ಕ್ಕಿಂತ ಕಡಿಮೆ ಇತ್ತು. ಟಿಎಂಸಿಯ ಶೇ.57, ಬಿಜೆಪಿಯ ಶೇ.36, ಕಾಂಗ್ರೆಸ್‌ನ ಶೇ.15, ಇತರ ಪಕ್ಷಗಳ ಶೇ.50ರಷ್ಟು ಸದಸ್ಯರು ಸಭೆಗಳಿಗೆ ಹಾಜರಾಗದೇ ಗೈರಾಗಿದ್ದಾರೆ. ಒಟ್ಟು ಎಂಟು ಸ್ಥಾಯಿ ಸಮಿತಿಗಳ ಸಭೆಗಳು ಫೆ.12ರಿಂದ ಮಾರ್ಚ್ 1ರ ನಡುವೆ ನಡೆದಿದೆ. ಬಜೆಟ್ ಕುರಿತ ಚರ್ಚೆ ವೇಳೆ ಇಲಾಖಾವಾರು ಅಗತ್ಯಗಳ ಪಟ್ಟಿ ಸಿದ್ಧಪಡಿಸಿ ಬೇಡಿಕೆಗಳನ್ನು ಮಂಡಿಸಲು ಈ ಸಭೆಗಳನ್ನು ನಡೆಸಲಾಗುತ್ತದೆ.



"ಇದು ಸಂಸತ್, ಪ್ರಾರಂಕೆಟ್ಟೆಯಲ್ಲ," ಎಂದು ರಾಜ್ಯಸಭಾ ಸಭಾಪತಿ ಎಂ.ವೆಂಕಯ್ಯ ನಾಯ್ಡು ಎಚ್ಚರಿಕೆ ನೀಡಿದ್ದು ಸಹ ಫಲ ನೀಡಿಲ್ಲ. ಆಡಳಿತ ಮತ್ತು ಪ್ರತಿಪಕ್ಷಗಳು ಪರಸ್ಪರ ಮಾತುಕತೆ ಮೂಲಕ ಸಮಸ್ಯೆ ಇತ್ಯರ್ಥಪಡಿಸಿಕೊಂಡು ಸುಗಮ ಕಲಾಪಕ್ಕೆ ಅನುವು ಮಾಡಿಕೊಡಬೇಕು ಎಂಬ ಅವರ ಬೇಡಿಕೆಗೂ ಮನ್ನಣೆ ಸಿಕ್ಕಿಲ್ಲ.

ಹೋಳಿ ಬಿಡುವಿನ ಬಳಿಕ ಸಂಸತ್ ಅಧಿವೇಶನ ಮಾರ್ಚ್ 11ರಂದು ಮತ್ತೆ ಆರಂಭವಾಗಲಿದೆ. ಲೋಕಸಭೆಯಲ್ಲಿ ಅದೇದಿನ ಮತ್ತು ರಾಜ್ಯಸಭೆಯಲ್ಲಿ ಮರುದಿನ ದಿಲ್ಲಿ ಗಲಭೆ ಕುರಿತ ಚರ್ಚೆಗೆ ಕೇಂದ್ರ ಸರಕಾರ ಸಮಯ ನಿಗದಿಪಡಿಸಿದೆ. ಗೃಹ ಸಚಿವ ಅಮಿತ್ ಶಾ ಉಭಯ ಸದನಗಳಲ್ಲಿಯೂ ಚರ್ಚೆ ಬಳಿಕ ಉತ್ತರ ನೀಡಲಿದ್ದಾರೆ.